ಆಲಸಿಗಳು. ಕಟ್ಟೆಗಳ ಮೇಲೆ ತಪಸ್ವಿಗಳ ತರಹ ತೂಕಡಿಸುತ್ತ ಕೂತಿದ್ದು ಸಿಟಿಬಸ್ಸು ಬಂದೊಡನೆ ಪಂಚೆ ಮೇಲೆತ್ತಿ ಕಟ್ಟಿಕೊಂಡು ನಿಷ್ಕಾರಣವಾಗಿ ಹೊಸಪೇಟೆ ಬಜಾರಿಗೆ ಬರುತ್ತಾರೆ; ಇವರಲ್ಲಿ ಹೆಂಡತಿಯನ್ನು ಕಾಡಿಸಿ ಪೀಡಿಸಿ ದುಡ್ಡು ಕಸಿದುಕೊಂಡು ಎಣ್ಣೆ ಹಾಕುವವರು ಗಣನೀಯವಾಗಿದ್ದಾರೆ. ಹಿಂದೆ ಮಲೆನಾಡಿನಲ್ಲಿ ಮಲೇರಿಯಾ ಕಾರಣದಿಂದ ಬಾಣಂತಿಯರು ಸತ್ತು ವಿಧುರರ ಸಂಖ್ಯೆ ಹೆಚ್ಚಾಗಿತ್ತು ಎಂದು ಓದಿದ್ದು ನೆನಪು; ಇಲ್ಲಾದರೆ, ಸೆರೆಗುಡುಕ ಗಂಡಸರ ದೆಸೆಯಿಂದ ಅಕಾಲಿಕವಾಗಿ ವಿಧವೆಯಾದವರು ದೊಡ್ಡ ಪ್ರಮಾಣದಲ್ಲಿದ್ದಾರೆ. ಈ ಗಂಡಸರಲ್ಲಿ ಕೆಲವರು ಆಷಾಢ ಮಾಸದಲ್ಲಿ ಗುಂಡೆಸೆತದ ಆಟ ಆಡುವರು. ಆಗ ಹಂಪಿರೋಡು ಸ್ಟೇಡಿಯಂ ಆಗಿ ಬದಲಾಗುತ್ತದೆ. ಈ ಆಟದ ವಿಧಾನವೆಂದರೆ, ಊರಿನಿಂದ ಹಂಪಿಯ ವಿರೂಪಾಕ್ಷ ಗುಡಿಯ ತನಕ ಕಿತ್ತಳೆಹಣ್ಣಿನ ಗಾತ್ರದ ಕಬ್ಬಿಣದ ಗುಂಡನ್ನು ರಸ್ತೆಯಲ್ಲಿ ಎಸೆಯುತ್ತ ಹೋಗುವುದು. ಯಾರು ಎಷ್ಟು ಎಸೆತದಲ್ಲಿ ತಲುಪುತ್ತಾರೊ ಅವರು ಜಯಶಾಲಿ. ಬೌಲರ್‌ನಂತೆ ಎಸೆಯುವವ ಒಬ್ಬನಾದರೆ, ರಸ್ತೆಯಲ್ಲಿ ಜನ–ವಾಹನ, ಜನ–ದನ ಅಡ್ಡಬಾರದಂತೆ ಟ್ರಾಫಿಕ್ ನಿಯಂತ್ರಿಸುವವರು ಹತ್ತಾಳು. ಗುಂಡು ಪೊದೆಯಲ್ಲಿ ಹೊಕ್ಕಾಗ ಹೆಕ್ಕಿಕೊಂಡು ಬರುವವರು ಐವರು. ಇದನ್ನೆಲ್ಲ ನೋಡುವ ಪ್ರೇಕ್ಷಕರು ಹಲವರು. ಮಜ್ಜಿಗೆ ಕುಡಿಯುವವನು ಒಬ್ಬ; ಮೀಸೆ ಎತ್ತಿ ಹಿಡಿಯುವುದಕ್ಕೆ ಹತ್ತು ಮಂದಿ. ಈ ನೆರವಿಯಲ್ಲಿ ಅದುರುತ್ತ ನಡೆಯುವ ಮುದುಕರೂ ಪ್ರಯಾಸದಿಂದ ಕುಂಟುತ್ತ ನಡೆಯುವವರೂ ಕಾಣಸಿಗುವರು. ಕುಂಟುತ್ತಿದ್ದ ಒಬ್ಬರನ್ನು ವಿಚಾರಿಸಲಾಗಿ ಅವರು ಯೌವನದಲ್ಲಿದ್ದಾಗ ಗುಂಡು ಕಾಲಿಗೆ ಬಡಿದು ಮೂಳೆ ಮುರಿಸಿಕೊಂಡವರೆಂದು ತಿಳಿಯಿತು. ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳು ಯಾಕೆ ಹಿಂದುಳಿದಿವೆ ಎಂದು ಗಂಭೀರ ಅಧ್ಯಯನಗೈದ ಸ್ನೇಹಿತರೊಬ್ಬರು, ಒಮ್ಮೆ ಕಾರನ್ನು ರಸ್ತೆಬದಿ ನಿಲ್ಲಿಸಿ ಈ ಆಟವನ್ನು ನೋಡಿದರು. ಕಡೆಗೆ ಆಳವಾದ ನಿಟ್ಟುಸಿರೊಂದನ್ನು ಬಿಟ್ಟು 'ಈ ದೇಶ ಉದ್ಧಾರವಾಗಲ್ಲ!' ಎಂದು ಕಾರಣಿಕ ನುಡಿದರು. ನಾನು ಶಾಪ ಕೇಳಿದವನಂತೆ ಬೆಚ್ಚಿಬಿದ್ದು 'ಹಂಗನ್ನಬೇಡಿ ಸಾರ್, ಇವರು ಒಂದು ಕಾಲಕ್ಕೆ ಸಾಮ್ರಾಜ್ಯವನ್ನೇ ಕಟ್ಟಿದವರು' ಎಂದೆ. ಅದಕ್ಕವರು 'ಹೌದೌದು. ಈಗಲೂ ಓಟುಹಾಕಿ ಹೊಸ ಸಾಮ್ರಾಟರನ್ನು ತಂದು ಕೂರಿಸಿದ್ದಾರಲ್ಲವಾ?' ಎಂದು ಮರುಪ್ರಶ್ನೆ ಹಾಕಿದರು. ಗಂಡಸರ ಸೃಜನಶೀಲತೆ ಯಾವೆಲ್ಲ ರೂಪದಲ್ಲಿ ವ್ಯಕ್ತವಾಗುತ್ತದೆ ಎಂದು ಅರಿಯದ ಸಿನಿಕರ ಜತೆ ವಾದಿಸಿ ಏನು ಪ್ರಯೋಜನ? ಸತ್ಯವನ್ನು ಹೀಗೆ ಕಟುವಾಗಿ ಮುಖದ ಮೇಲೆ ಹೊಡೆದಂತೆ ಹೇಳುವವರು ಜೀವನದಲ್ಲಿ ಏನು ತಾನೇ ಸಾಧಿಸಿದ್ದಾರೆ?

## 5

ಹಂಪಿದಾರಿಯಲ್ಲಿ ಕಣ್ಮುಚ್ಚಿ ಪಯಣಿಸಿದರೆ ಸಾಕು, ಹಲವಾರು ಪರಿಮಳಗಳ ವಲಯ ದಾಟುವ ಅನುಭವವಾಗುತ್ತದೆ. ಈ ಪರಿಮಳದ ಮೂಲಗಳು ಹಲವು: ಸಿನುಗು ವಾಸನೆ ಹೊಮ್ಮಿಸುವ ಕುರಿರೊಪ್ಪಗಳು, ಲಾವಾರಸದಂತಿರುವ ಕಡಲೆಹಿಟ್ಟಿನಲ್ಲಿ ಹಸಿರು ಮೆಣಸಿನಕಾಯನ್ನು ಮುಳುಗಿಸಿ, ಕುದಿವ ತೈಲದಲ್ಲಿ ಈಜಲುಬಿಟ್ಟು ಹೊಂಬಣ್ಣ ಬರುವಂತೆ ಹದವಾಗಿ ಬೇಯಿಸುವ ಹೋಟೆಲು (ಒಂದರ ಹೆಸರು 'ಹೋಟೆಲ್ ಪುನರ್ಜನ್ಮ'!), 'ಸ್ವಚ್ಛಭಾರತ'ದವರಿಗೆ ಸವಾಲೆಸೆಯುವಂತೆ ರಸ್ತೆಯನ್ನೊತ್ತರಿಸಿ ಮುಂದೆ ಬಂದಿರುವ ತಿಪ್ಪೆಗಳು, ಆಲೆಮನೆಗಳು, ಬಾಡೂಟದ ಬಯಲುಗಳು ಹಾಗೂ ಮೀನು ಮಾರುವ ಕೆರೆಕೋಡಿ–ಇತ್ಯಾದಿ. ಇವುಗಳಲ್ಲಿ ಕೊನೆಯ ಮೂರನ್ನು ಮಾತ್ರ ವರ್ಣಿಸಬಹುದು.

ಒಂದು: ಇಲ್ಲಿ ಸಕ್ಕರೆಯನ್ನೂ ಮದ್ಯವನ್ನೂ ಒಟ್ಟಿಗೆ ಉತ್ಪಾದಿಸುವ ಹಳೆಯ